# ನನ್ನ ವಿಶೇಷ ಪ್ರತಿಜ್ಞೆ

ಪರಲೋಕದಲ್ಲಿರುವ ನಮ್ಮ ತಂದಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ- ನಿನ್ನ ಆಳ್ವಿಕೆ ನನ್ನ ಹೃದಯದಲ್ಲಿ ಹೆಚ್ಚು ಹೆಚ್ಚಾಗಿ ಬರಲಿ; ನಿನ್ನ ಚಿತ್ತ ನನ್ನ ಮರ್ತ್ಯ ಶರೀರದಲ್ಲಿ ನೆರವೇರಲಿ. ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನೀಡಿರುವ ನಿನ್ನ ಸಕಾಲಿಕ ಸಹಾಯದ ಕೃಪಾವಾಗ್ದಾನದಲ್ಲಿ ಭರವಸವಿಟ್ಟು ಈ ಪ್ರತಿಜ್ಞೆಯನ್ನು ತೆಗೆದುಕೊಳ್ಳುತ್ತೇನೆ.

ಅನುದಿನವೂ ನಾನು ಪ್ರಾರ್ಥಿಸುವಾಗ ಈ ಯುಗಾಂತ್ಯದಲ್ಲಿ ಎಲ್ಲೆಡೆ ನಡೆಯುತ್ತಿರುವ ಸುವಾರ್ತಾಸುಗ್ಗಿಕಾರ್ಯ ಫಲಕಾರಿಯಾಗುವುದನ್ನೂ ವಿಶೇಷವಾಗಿ ನನಗೂ ಹಾಗೂ ಇತರ ಎಲ್ಲೆಡೆ ಇರುವ ನನ್ನ ಪ್ರೀತಿಯ ಜೊತೆಗೆಲಸದವರಿಗೂ ಇದರಲ್ಲಿ ಪಾಲುಗಾರರಾಗಲು ದೊರೆತ ಭಾಗ್ಯವನ್ನೂ ಸ್ಮರಿಸುತ್ತೇನೆ.

ನಾನು ಇನ್ನೂ ಶ್ರದ್ಧೆಯಿಂದ ಪ್ರತಿಜ್ಞೆ ಮಾಡಿ ಹೇಳುವುದೇನೆಂದರೆ, ನಿನ್ನ ಹಾಗೂ ನಿನ್ನ ಪ್ರೀತಿಯ ಮಂದೆಯ ಸೇವೆಗೆ ಹೆಚ್ಚು ಸಮರ್ಥನಾಗಲು ನನ್ನ ನಡೆನುಡಿಕಾರ್ಯಗಳೆಲ್ಲವನ್ನು ಸಾಧ್ಯವಾದಷ್ಟು ಕೂಲಂಕುಷವಾಗಿ ಪರಿಶೀಲಿಸಿ ಕ್ರಮ ಪಡಿಸಿಕೊಳ್ಳುವೆನು.

ನಾನು ನಿಮಗೆ ಪ್ರತಿಜ್ಞೆಯಾಗಿ ಹೇಳುವುದೇನೆಂದರೆ ಆತ್ಮ ತತ್ವವನ್ನು ಹಾಗೂ ಕ್ರೈಸ್ತಧರ್ಮದ ಹೆಸರಿನಲ್ಲಿ ನಡೆಯುವ ಗುಪ್ತಾಚಾರಗಳಿಗೆ ಸಂಬಂಧಿಸಿದಂತವುಗಳೆಲ್ಲವನ್ನು ಪ್ರತಿರೋಧಿಸುವುದಕ್ಕೆ ಎಚ್ಚರವಾಗಿರುತ್ತೇನೆ. ಅಲ್ಲದೆ ಇರುವುದಾದರೋ ಇಬ್ಬರು ಒಡೆಯರೆಂಬುದನ್ನು ನೆನೆದು ಇಂಥಹವುಗಳು ದೇವವಿರೋಧಿಗೆ ಸಂಬಂಧಿಸಿದವುಗಳಾದ್ದರಿಂದ ಬುದ್ಧಿಗ್ರಹಿಕೆಗೆ ತೋರುವ ಎಲ್ಲಾ ವಿಧಾನಗಳಿಂದಲೂ ಇವುಗಳನ್ನು ಪ್ರತಿರೋಧಿಸುತ್ತೇನೆ.

ನಾನು ಮತ್ತೂ ಪ್ರತಿಜ್ಞೆಮಾಡಿ ಹೇಳುವುದೇನೆಂದರೆ – ಎಲ್ಲಾ ಸ್ಥಳಗಳಲ್ಲಿಯೂ ಎಲ್ಲಾ ಸಮಯಗಳಲ್ಲಿಯೂ ನಾನು ಇತರ ಲಿಂಗದವರೊಂದಿಗೆ ಏಕಾಂತವಾಗಿರುವಾಗ ಎಲ್ಲರ ಮುಂದೆ ಇರುವವನಂತೆ, ಅಂದರೆ ಕರ್ತನ ಸಭೆಯ ಮುಂದೆ ಇರುವವನಂತೆ, ವರ್ತಿಸುತ್ತೇನೆ. ಅಲ್ಲದೆ ನನ್ನ ಬುದ್ಧಿ ವಿವೇಚನೆಗಳಿಗೆ ಸರಿದೋರುವ ಮಟ್ಟಿಗೆ ನಾನು ಇತರ ಲಿಂಗದವರೊಂದಿಗೆ ಒಂದೇ ಕೊಠಡಿಯಲ್ಲಿ ಅದರ ಬಾಗಿಲುಗಳು ವಿಶಾಲವಾಗಿ ತೆರೆಯದಿರುವಲ್ಲಿ ಒಬ್ಬನೇ ಇರದಂತೆ ನೋಡಿಕೊಳ್ಳುತ್ತೇನೆ.

ಇದಕ್ಕೆ ಹೊರತಾದವರೆಂದರೆ:

ಸಹೋದರರ ವಿಷಯದಲ್ಲಿ – ಹೆಂಡತಿ, ಮಕ್ಕಳು, ತಾಯಿ ಹಾಗೂ ಒಡಹುಟ್ಟಿದ ಅಕ್ಕ, ತಂಗಿಯರು.

ಸಹೋದರಿಯರ ವಿಷಯದಲ್ಲಿ – ಗಂಡ, ಮಕ್ಕಳು, ತಂದೆ ಹಾಗೂ ಒಡಹುಟ್ಟಿದ ಅಣ್ಣ, ತಮ್ಮಂದಿರು.